# ಶ್ರೀ ಸುತ್ತೂರು ಮಠ

### ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 285

**5 ನವೆಂಬರ್ 2025 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ದ್ವಂದ್ವ ಗಾಯನ



**ವಿದುಷಿಯರಾದ ಎಸ್. ಐಶ್ವರ್ಯ ಮತ್ತು ಎಸ್. ಸೌಂದರ್ಯ**



**ವಿದುಷಿ ಅದಿತಿ ಕೃಷ್ಣಪ್ರಕಾಶ್**
ವಯೊಲಿನ್



**ವಿದ್ವಾನ್ ಹೆಚ್. ಹರಿಹರನ್**
ಮೃದಂಗ



**ವಿದ್ವಾನ್ ಶಮಿತ್ ಎಸ್. ಗೌಡ**
ಘಟಂ

---

**ವಿ.ಸೂ. :** ಈ ಮೊದಲು ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್‌ರವರ ಗಾಯನ ಕಾರ್ಯಕ್ರಮ ನಿಗದಿಯಾಗಿತ್ತು. ಅನಿವಾರ್ಯ ಕಾರಣಗಳಿಂದ ಅವರಿಗೆ ಭಾಗವಹಿಸಲು ಸಾಧ್ಯವಾಗದುದರಿಂದ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ.

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿಯರಾದ ಎಸ್. ಐಶ್ವರ್ಯ ಮತ್ತು ಎಸ್. ಸೌಂದರ್ಯರವರು** ಸಂಗೀತ ಕ್ಷೇತ್ರದಲ್ಲಿ "ದೈವೀ ಸಂಗೀತದ ಜೋಡಿ" ಎಂದು ಖ್ಯಾತರಾಗಿದ್ದಾರೆ. ಇವರಿಬ್ಬರೂ ಭಾರತರತ್ನ ಡಾ. ಎಂ.ಎಸ್. ಸುಬ್ಬಲಕ್ಷ್ಮಿಯವರ ಮರಿಮಕ್ಕಳು. ಖ್ಯಾತ ಸಂಗೀತ ವಿದುಷಿ ಡಾ. ರಾಧಾ ವಿಶ್ವನಾಥನ್‌ರವರ ಮೊಮ್ಮಕ್ಕಳು. ಸಂಗೀತ ವೈದುಷ್ಯಕ್ಕಾಗಿ, ಈ ಇಬ್ಬರು ಸೋದರಿಯರು ನ್ಯೂಯಾರ್ಕ ನಾರ್ತ್ ಹ್ಯಾಂಪ್‌ಸ್ಟೈಡ್ ನಗರದಿಂದ ಸಮ್ಮಾನಿತರಾಗಿದ್ದಾರೆ.

ವಿದುಷಿ ಐಶ್ವರ್ಯ ಅವರ ಮುತ್ತಜ್ಜಿ ಶ್ರೀಮತಿ ಎಂ.ಎಸ್. ಸುಬ್ಬಲಕ್ಷ್ಮಿಯವರಿಂದ ನಾಲ್ಕನೆಯ ವರ್ಷಕ್ಕೇ ಸಂಗೀತ ಪಾಠ ಹೇಳಿಸಿಕೊಂಡ ಭಾಗ್ಯಶಾಲಿಗಳು. ಅಜ್ಜಿ ದಿವಂಗತ ರಾಧಾ ವಿಶ್ವನಾಥನ್‌ರವರ ಬಳಿ ಸುಮಾರು ಎರಡು ದಶಕಗಳ ಕಾಲ ಶಿಷ್ಯವೃತ್ತಿ ಮಾಡಿ, ಎಂ.ಎಸ್. ಸಂಗೀತ ಬಾನಿಯುನ್ನು ಶ್ರದ್ಧಾಪೂರ್ವಕವಾಗಿ ಕರತಲಾಮಲಕ ಮಾಡಿಕೊಂಡಿದ್ದಾರೆ. ಸುಮಾರು 17 ವರ್ಷಗಳ ಕಾಲ ವಿದುಷಿ ಶ್ರೀಮತಿ ಜಂಬು ಕಣ್ಣನ್ ಅವರ ಬಳಿಯೂ ಕಲಿತರು. ಸಂಗೀತ ಕಲಿಕೆಯ ಪ್ರಾರಂಭಿಕ ವರ್ಷಗಳಲ್ಲಿ ವಿದ್ವಾನ್ ಎ. ಶಂಕರರಾಮನ್ ಮತ್ತು ವಿದುಷಿ ಶ್ರೀಮತಿ ಬಿ. ನಾಗಲಕ್ಷ್ಮಿಯವರ ಬಳಿ ವೀಣಾವಾದನದ ಕಲಿಯನ್ನು ಮುಂದುವರಿಸಿ, 14ನೆಯ ವರ್ಷಕ್ಕೆ ಆಸಕ್ತ ಶ್ರೋತೃವೃಂದದ ಮುಂದೆ ಕಚೇರಿ ನೀಡಿದ ಸಾಧನೆ ಇವರದು.

ವಿದುಷಿ ಸೌಂದರ್ಯರವರ ಆರಂಭಿಕ ಸಂಗೀತ ಶಿಕ್ಷಣ ಅಜ್ಜಿ ಡಾ. ರಾಧಾ ವಿಶ್ವನಾಥನ್‌ರವರ ಬಳಿ ನಡೆಯಿತು. ಅನಂತರ ವಿದುಷಿ ಶ್ರೀಮತಿ ನೀಲಾ ರಾಮಗೋಪಾಲ್‌ರ ಬಳಿ 10 ವರ್ಷ ಸಂಗೀತ ಸಾಧನೆ. ಇವರಿಗೆ ವಯೊಲಿನ್ ವಾದನದಲ್ಲೂ ಪರಿಣತಿ ಇದೆ. ಮೊದಲಿಗೆ ಶ್ರೀಮತಿ ಅನುತ್ತಮಾ ಮುರಳಿಯವರಲ್ಲಿ; ಪ್ರಸ್ತುತ ಶ್ರೀ ವಿಶ್ವಜಿತ್ ಮತ್ತೂರು ಮತ್ತು ವಿದುಷಿ ಎ. ಕನ್ಯಾಕುಮಾರಿಯವರಲ್ಲಿ ಶಿಷ್ಯವೃತ್ತಿ ಮುಂದುವರಿಸಿದ್ದಾರೆ. ಭರತನಾಟ್ಯ ಕಲಾವಿದೆ ಕೂಡ. ಶ್ರಿಮತಿ ಸುಮಿತ್ರ ನಿತಿನ್‌ರವರ ನೇತೃತ್ವದಲ್ಲಿ ಅರಂಗೇಟ್ರಂ ಆಗಿದೆ. ಇವರು ಪಾಶ್ಚಾತ್ಯ ವಯೊಲಿನ್‌ನಲ್ಲಿ ಏಳನೆಯ ಗ್ರೇಡ್ ಪರೀಕ್ಷೆಯಲ್ಲಿ ಅತ್ಯುಚ್ಚ ಶ್ರೇಣಿ ಪಡೆದಿರುವರು. ಲಂಡನ್ನಿನ ಟ್ರಿನಿಟಿ ಕಾಲೇಜ್ ಆಫ್ ಮ್ಯೂಸಿಕ್‌ನಿಂದ ಪಿಯಾನೋ ವಾದನದಲ್ಲಿ ಉತ್ತೀರ್ಣರಾಗಿದ್ದಾರೆ.

ಇಬ್ಬರು ಸೋದರಿಯರೂ ಪಂ. ಓಂಕಾರನಾಥ್ ಹವಾಲ್ದಾರ್‌ರವರಲ್ಲಿ ಹಿಂದೂಸ್ತಾನಿ ಸಂಗೀತ ಕಲಿತಿದ್ದಾರೆ. ವಿದ್ವಾನ್ ಎ.ಎಸ್. ಮುರಳಿಯವರ ಬಳಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಅಮೆರಿಕದಲ್ಲಿರುವ ಭಾರತೀಯ ರಾಯಭಾರಿ ಕಛೇರಿಯಲ್ಲಿ ಮತ್ತು ಜೊಹಾನ್ಸ್‌ಬರ್ಗ್‌ನ ಪ್ರತಿಷ್ಠಿತ ಲಿರಿಕ್ಸ್ ಥಿಯೇಟರ್‌ನಲ್ಲಿ ಇವರುಗಳು ನೀಡಿದ ಕಚೇರಿಗಳು ಸ್ಮರಣೀಯವಾದವು. ಖ್ಯಾತ ಹಿಂದೂಸ್ಥಾನಿ ಗಾಯಕಿ ಶ್ರೀಮತಿ ಕಿಶೋರಿ ಅಮೋನ್‌ಕರ್‌ಜಿಯವರು ಸಂಸ್ಮರಣಗಾನಸರಸ್ವತಿ ಉತ್ಸವದಲ್ಲಿ ಹಾಡಿದ ಹಿರಿಮೆಯೂ ಇವರುಗಳ ಪಾಲಿಗಿದೆ.

**ವಿದುಷಿ ಅದಿತಿ ಕೃಷ್ಣಪ್ರಕಾಶ್‌ರವರು** ಪ್ರತಿಭಾನ್ವಿತ ವಯೊಲಿನ್ ಕಲಾವಿದರಲ್ಲೊಬ್ಬರು. ನಾಲ್ಕನೆಯ ವಯಸ್ಸಿನಿಂದಲೇ ಖ್ಯಾತ ವಿದ್ವಾಂಸ ಶ್ರೀ ಎಚ್.ಕೆ. ನರಸಿಂಹಮೂರ್ತಿ ಮತ್ತು ಶ್ರೀ ಆರ್.ಕೆ. ಶ್ರೀರಾಮಕುಮಾರ್‌ರವರ ಬಳಿ ಶಿಷ್ಯವೃತ್ತಿ ಮಾಡಿದರು. ಸುಂದರ ನುಡಿಸಾಣಿಕೆ, ನಾದಸೌಷ್ಠವ ಮತ್ತು ಕಲಾತ್ಮಕತೆಗಳ ಮೂಲಕ ಅಖಿಲ ಭಾರತ ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರಾಗಿದ್ದಾರೆ. ಏಕವ್ಯಕ್ತಿ ವಾದಕರಾಗಿ ಮತ್ತು ಸಾಥೀದಾರರಾಗಿ ಅತ್ಯಂತ ಬೇಡಿಕೆಯುಳ್ಳ ಕಲಾವಿದರು. ದೇಶವಿದೇಶಗಳಲ್ಲಿ ಕಲಾಪ್ರಾವೀಣ್ಯವನ್ನು ಮೆರೆದಿದ್ದಾರೆ. ಸಂಗೀತ ಕ್ಷೇತ್ರದ ದಿಗ್ಗಜರೊಂದಿಗೆ ನಾದಸಂವಾದವನ್ನು ಮುಂದುವರಿಸುತ್ತಿದ್ದಾರೆ ಮತ್ತು ವಯೊಲಿನ್ ಸಹಕಾರ ನೀಡುತ್ತಿದ್ದಾರೆ.

**ವಿದ್ವಾನ್ ಹೆಚ್. ಹರಿಹರನ್‌ರವರು** ಚೆನ್ನೈ ಮೂಲದ ಪ್ರಖ್ಯಾತ ಮೃದಂಗ ಕಲಾವಿದರು. ಹಿರಿಯ ವಿದ್ವಾಂಸರಾದ ಶ್ರೀ ಪತ್ರಿ ಸತೀಶ್‌ಕುಮಾರ್‌ರವರ ಬಳಿ ಕಳೆದ ಹತ್ತು ವರ್ಷಗಳಿಂದಲೂ ಲಯಸಾಧನೆ ಮಾಡುತ್ತಿದ್ದಾರೆ. ಚೆನ್ನೈ ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಹತ್ತನೆಯ ವರ್ಷದಿಂದಲೇ ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವರು. ವಿದ್ವಾಂಸರಾದ ಶ್ರೀ ಅಭಿಷೇಕ್ ರಘುರಾಂ, ಶ್ರೀ ಶಶಾಂಕ್ ಸುಬ್ರಹ್ಮಣ್ಯಂ, ಚಿತ್ರವೀಣಾ ಎನ್. ರವಿಕಿರಣ್, ಶ್ರೀ ಲಾಲ್‌ಗುಡಿ ಜಿ.ಜೆ.ಆರ್. ಕೃಷ್ಣನ್, ಹೈದರಾಬಾದ್ ಸಹೋದರರು, ಉಸ್ತಾದ್ ಶಹೀದ್ ಪರ್ವೇಜ್ ಮುಂತಾದವರುಗಳೊಡನೆ ವೇದಿಕೆ ಹಂಚಿಕೊಂಡಿದ್ದಾರೆ.

**ವಿದ್ವಾನ್ ಶಮಿತ್ ಎಸ್. ಗೌಡರವರು** ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ ಮತ್ತು ವಿದ್ವಾನ್ ಗಿರಿಧರ್ ಉಡುಪರವರ ಶಿಷ್ಯರು. ಕರ್ನಾಟಕ ರಾಜ್ಯಮಟ್ಟದ ತಾಳವಾದ್ಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವಿದ್ಯಾರ್ಥಿವೇತನ ಪಡೆದ ಪ್ರತಿಭಾನ್ವಿತರು. ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಘಟಂ ವಾದನವನ್ನು ಪ್ರಸ್ತುತಿಪಡಿಸಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿ ಆಯೋಜಿಸಿದ್ದ 'ಸ್ಪಿರಿಟ್ ಆಫ್ ಯುವಜನೋತ್ಸವ'ದಲ್ಲಿ ಭಾಗವಹಿಸಿದ್ದರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಪ್ರವೃತ್ತಿಯಲ್ಲಿ ಕಲಾವಿದರು.

## ಬೆಳದಿಂಗಳ ಸಂಗೀತ 286

### 4 ಡಿಸೆಂಬರ್ 2025



**ಗಾಯನ**

**ವಿದುಷಿ ಬಿ.ಎನ್. ಗಾಯತ್ರಿ ದೇವಿ**

**ವಯೊಲಿನ್**

**ವಿದ್ವಾನ್ ತುಮಕೂರು ಯಶಸ್ವಿ**





**ಮೃದಂಗ**

**ವಿದ್ವಾನ್ ವಿಕ್ರಮ್ ಭಾರದ್ವಾಜ್**



**ಮೋರ್ಚಿಂಗ್**

**ವಿದ್ವಾನ್ ಆರ್. ದಾಸಪ್ಪ**

☎ 0821–2548221, 2548223 * ✉ sutturmath@jssonline.org